## ಇಲ್ಲಿಯವರೆಗೆ

ಗುಲಾಬ ಬಾಪೂ ಬಳಿಗೆ ಬಂದಾಗ ಆಕೆಯನ್ನು ಪ್ರೀತಿಯಿಂದ ಮಾತನಾಡಿಸಿ 'ಚಂಚಿ' ನೀನು ನಮ್ಮ ಮನೆಯ ಸೊಸೆಯಲ್ಲ; ಮಗಳು' ಎಂದು ಹೇಳಿದಾಗ ಗುಲಾಬ ಕಣ್ಣುಗಳು ತೇವವಾಗುತ್ತವೆ. ತಾನು ತವರಿನ ರಾಜಕೋಟದ ಬಂಗ್ಲೆಯಲ್ಲಿ, ಬೇವಿನ ಕಂಪಿನ ಗಾಳಿಯನ್ನೇ ಉಸಿರಾಡಿದ ಅನುಭವ ಗುಲಾಬಳಿಗಾಗುತ್ತದೆ. ರಾಮದಾಸ, ದೇವದಾಸ ಮಣಿಲಾಲ ಎಲ್ಲರನ್ನೂ ಗುಲಾಬ ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಬಾಪೂ ಅವರ ಹೋರಾಟದಲ್ಲಿ ಭಾಗವಹಿಸಿದ್ದ ನಾಯುಡು 'ಬಾಪು ಅವರನ್ನು ಬಂಧಿಸಲಾಗಿದೆ' ಎಂಬ ವಿಚಾರ ತಿಳಿಸುತ್ತಾನೆ.

ಈ ಮಧ್ಯೆ ಹರಿಲಾಲ ಜೋಹಾನ್ಸ್‌ಬರ್ಗ್‌ನಿಂದ ಫೀನಿಕ್ಸ್ ಆಶ್ರಮಕ್ಕೆ ಮರಳುತ್ತಾನೆ. ಕೊಂಚ ದಿನಗಳ ಬಳಿಕ ಬಾಪೂ ಕೂಡ ಆಶ್ರಮಕ್ಕೆ ಮರಳುತ್ತಾರೆ. ಅವರಿಗೆ ಗಾಯಗಳಾಗಿರುತ್ತದೆ. ಅದಕ್ಕೆ ಕಪ್ಪು ಮಣ್ಣಿನ ಉಪಚಾರವೂ ನಡೆಯುತ್ತದೆ. ಹರಿಲಾಲ–ಗುಲಾಬರಿಗೆ ಮಗು ಹುಟ್ಟುತ್ತದೆ. ಅದು ರಾಮನವಮಿ ದಿನವಾಗಿದ್ದು, ಆ ದಿನ ಲಕ್ಷ್ಮಿ ಬಂದಿರುವುದಕ್ಕೆ ಮಗುವಿಗೆ ಮುದ್ದಿನಿಂದ 'ರಾಮಿ' ಎಂದು ಹೆಸರು ಇಡುತ್ತಾರೆ. ಆದಾಗಿ ಹರಿಲಾಲನೂ ಹೋರಾಟಕ್ಕೆ ಸಿದ್ಧನಾಗಿ ಬಾಪೂ ಆಶೀರ್ವಾದ ಪಡೆಯುತ್ತಾನೆ. 'ಗೆಲುವು ನಿನ್ನದಾಗಲಿ' ಎಂದು ಬಾಪೂ ಮನಸಾರೆ ಹಾರೈಸುತ್ತಾರೆ.



ಒಂದು ಪ್ರತಿನಿಧಿ ತಂಡದೊಂದಿಗೆ ಇಂಗ್ಲೆಂಡ್‌ಗೆ ಹೋಗಿದ್ದರು.

ಮಣಿಲಾಲ ಹರಿಲಾಲನಿಗೆ ಮೊಟ್ಟ ಮೊದಲು ಈ ಸುದ್ದಿಯನ್ನೇ ಹೇಳಿದ. ಆದರೆ ಇಷ್ಟು ಸುದ್ದಿ ಮಾತ್ರದಿಂದಲೇ ಹರಿಲಾಲ ಸಂತೋಷ ಪಡಲಿಲ್ಲ. ಬಾಪೂ ಅನೇಕ ವರ್ಷಗಳಿಂದ ವಿದೇಶದಲ್ಲಿದ್ದರು. ಅವರು ವಿದೇಶಕ್ಕೆ ಹೋಗುವುದು ಹೊಸ ಸಂಗತಿಯಾಗಿರಲಿಲ್ಲ. ಈಗ ಬಾಪೂ ಪ್ರವಾಸಕ್ಕೆ ಹೋಗಿರಲಿಲ್ಲ. ಈಗ ಅವರು ಆಫ್ರಿಕಾದಲ್ಲಿ ವಾಸಿಸುತ್ತಿದ್ದ ಭಾರತೀಯರ ಅತಿ ನಾಜೂಕು ಗಳಿಗೆಯಲ್ಲಿ ಬಹು ದೊಡ್ಡ ಜವಾಬ್ದಾರಿಯನ್ನು ಹೊತ್ತು ಹೋಗಿದ್ದರು. ವಿದೇಶದಲ್ಲಿ ಅವರ ಯಾವ ಮತ್ತು ಎಷ್ಟು ಮಾತುಗಳನ್ನು ಒಪ್ಪಲಾಗುವುದು ಎಂಬುದು ಇನ್ನೂ ಅನಿಶ್ಚಿತವಾಗಿತ್ತು. ಹೀಗಾಗಿ ಬಾಪೂ ಅವರ ಈ ಪ್ರಯಾಣ ಯೋಚನೆಗೀಡು ಮಾಡುವಂಥದ್ದಾಗಿತ್ತು. ಆದರೆ ಮಣಿಲಾಲ ಹೇಳಿದ ವಿಷಯ ಬೇರೆಯದೇ ಆಗಿತ್ತು.

ಹರಿಲಾಲ ಮಿಸ್ಟರ್ ಪೋಲಕ್‌ರನ್ನು ಚೆನ್ನಾಗಿ ಗುರುತಿಸಿದ್ದ. ಫೀನಿಕ್ಸ್ ಆಶ್ರಮದಲ್ಲಿ 'ಇಂಡಿಯನ್ ಒಪೀನಿಯನ್' ಪತ್ರಿಕೆಯನ್ನು ನಡೆಸುವಲ್ಲಿ ಅವರ ಕೊಡುಗೆ ಮಹತ್ವದ್ದಾಗಿತ್ತು. ಹರಿಲಾಲ ಅನೇಕ ಬಾರಿ ಅವರೊಂದಿಗೆ ಪತ್ರಿಕಾಕಚೇರಿಯಲ್ಲಿ ಕೆಲಸವನ್ನು ಮಾಡಿದ್ದ. ಬಾಪೂ ಅವರ ಕಚೇರಿಯನ್ನೂ ಸಹ ಪೋಲಕ್ ನೋಡಿಕೊಳ್ಳುತ್ತಿದ್ದರು. ಹೋರಾಟದ ಕೆಲಸಗಳಲ್ಲಿ ಪೋಲಕ್, ಬಾಪೂ ಅವರಿಗೆ ಸಹಾಯಕನಾಗಿ ಮತ್ತು ಮಿತ್ರನಾಗಿ ತುಂಬಾ ಶ್ರಮಿಸುತ್ತಿದ್ದರು.

ಬಾಪೂ ಅವರು ವಿದೇಶಕ್ಕೆ ಹೋದಾಗನಿಂದ ಪೋಲಕ್ ಜೋಹಾನ್ಸ್‌ಬರ್ಗ್‌ನಲ್ಲಿದ್ದು ಹೋರಾಟದ ಸೂತ್ರವನ್ನು ಇನ್ನಿತರ ಮುಖಂಡರೊಂದಿಗೆ ಸಂಭಾಳಿಸಿದ್ದರು. ಬಾಪೂ ಅವರು ವಿದೇಶದಿಂದ ಮರಳಿ ಬರಲು ಸಮಯಾವಕಾಶವಿತ್ತು. ಹರಿಲಾಲ ಇನ್ನೂ ಜೈಲಿನಲ್ಲಿದ್ದ; ಆಗಲೇ ಅದೊಂದು ದಿನ ಅಕಸ್ಮಾತ್ ಪೋಲಕ್ 'ಇಂಡಿಯನ್ ಒಪೀನಿಯನ್' ಕೆಲಸದ ನಿಮಿತ್ತ ಫೀನಿಕ್ಸ್‌ಗೆ ಬಂದರು. ಪೋಲಕ್‌ರಿಂದ ಬಾಪೂ ಮತ್ತು ಹೋರಾಟದ ಹೊಸ ಸುದ್ದಿಯನ್ನು ತಿಳಿಯಲು ಆಶ್ರಮವಾಸಿಗಳು ಅವರನ್ನು ಸುತ್ತುವರೆದು ನಿಂತರು. ಪೋಲಕ್ ಎಲ್ಲರಿಗೂ ಅಗತ್ಯವೆನಿಸಿದ ಸುದ್ದಿಯನ್ನು ಹೇಳಿ, ನಂತರ ಬಾ ಅವರಿಗೆ ಹೇಳಿದರು

'ಮಿಸೆಸ್ ಗಾಂಧಿ! ನಿಮಗೆ ನನ್ನ ಬಳಿ ವಿಶೇಷ ಸುದ್ದಿಯೊಂದಿದೆ.'

ಬಾ ಗಾಬರಿಗೊಂಡರು. ಅವರು ತಲೆಯೆತ್ತಿ ಮೆಲ್ಲನೆ ಕೇಳಿದರು, 'ಪೋಲಕ್‌ಜಿ, ಏನು ವಿಷಯ? ಎಲ್ಲರೂ ಕ್ಷೇಮ ತಾನೇ?'

'ಚಿಂತಿಸುವ ಅಗತ್ಯವಿಲ್ಲ, ಮಿಸೆಸ್ ಗಾಂಧಿ. ಇದು ನಿಮಗೆ ಖುಷಿ ಕೊಡುವ ಸುದ್ದಿಯಾಗಿದೆ' ಪೋಲಕ್ ಹೇಳಿದರು, 'ನಿಮ್ಮ ಮಕ್ಕಳು ವಿದ್ಯಾಭ್ಯಾಸ ಮಾಡದೆ ಉಳಿದರು, ಮಿಸ್ಟರ್ ಗಾಂಧಿ ಅವರಿಗೆ ಅಧ್ಯಯನ ಮಾಡಲು ಅವಕಾಶ ಕೊಡಲಿಲ್ಲ ಎಂಬ ನಿಮ್ಮ ದೂರು ಈಗ ದೂರವಾಗುವುದರಲ್ಲಿದೆ.'

'ನನಗೆ ತಿಳಿಯುವಂತೆ ಹೇಳಿ, ಪೋಲಕ್‌ಜಿ' ಬಾ ಕಳವಳಗೊಂಡರು, 'ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ನಿಮಗೆ ಗೊತ್ತೇ ಇದೆ.'

'ಈಗ ಈ ಪರಿಸ್ಥಿತಿಯಲ್ಲಿ ಬದಲಾವಣೆ ಬರಬಹುದು' ಪೋಲಕ್ ಸ್ಪಷ್ಟಪಡಿಸಿದರು. 'ವಿದೇಶದಿಂದ ಮಿಸ್ಟರ್ ಗಾಂಧಿಯವರು ನನಗೆ, 'ನನ್ನ ಹಳೆಯ ಸ್ನೇಹಿತ ಪಂ. ಪ್ರಾಣ್ ಜೀವನ್ ಮೆಹತಾ ಅವರು ನನಗೆ ವಿದೇಶದಲ್ಲಿ ತುಂಬಾ ಸಹಾಯವನ್ನು ಮಾಡುತ್ತಿದ್ದಾರೆ' ಎಂದು ಪತ್ರ ಬರೆದಿದ್ದಾರೆ. ಡಾ.ಮೆಹತಾ ವಿದೇಶದಲ್ಲಿರುವುದು ನಿಮಗೆ ಗೊತ್ತಿದೆ.'

'ಹೌದೌದು...ಈಗ...'

'ಅದನ್ನೇ ಹೇಳುತ್ತಿದ್ದೇನೆ', ಪೋಲಕ್ ನಕ್ಕು ಹೇಳಿದರು, 'ಡಾ.ಮೆಹತಾ ಮಿಸ್ಟರ್ ಗಾಂಧಿಯವರಿಗೆ, 'ಒಂದು ವೇಳೆ ನೀವು ನಿಮ್ಮ ಒಬ್ಬ ಮಗನನ್ನು ಬ್ಯಾರಿಸ್ಟರ್ ಮಾಡಲು ವಿದೇಶಕ್ಕೆ ಕಳುಹಿಸಿದರೆ, ನಾನು ಎಲ್ಲಾ ಖರ್ಚು ವೆಚ್ಚಗಳೊಂದಿಗೆ, ಎಲ್ಲಾ ವ್ಯವಸ್ಥೆಯನ್ನು ಮಾಡುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ' ಎಂದು ಹೇಳಿದ್ದಾರೆ. ಈಗ ಹೇಳಿ, ನೀವು ಯಾರಿಗೆ ಬ್ಯಾರಿಸ್ಟರ್ ಮಾಡುತ್ತೀರ? ಹರಿಲಾಲನಿಗೋ ಅಥವಾ ಮಣಿಲಾಲನಿಗೋ? ಅಥವಾ ತುಂಟ ದೇವದಾಸನಿಗೋ?'

ಮಣಿಲಾಲ ಪೋಲಕ್‌ರ ಸಮೀಪದಲ್ಲಿಯೇ ನಿಂತು ಈ ಸುದ್ದಿಯನ್ನು ಕೇಳುತ್ತಿದ್ದ. ಅವನಿಗೆ ರೋಮಾಂಚನವಾಯಿತು. ಅವನು ಬಾ ಅವರನ್ನು ನೋಡಿದ. ಬಾ ಅತ್ಯಂತ ಸಂತಸವನ್ನು ಅನುಭವಿಸುತ್ತಿದ್ದರು.

'ಡಾ. ಮೆಹತಾ ತುಂಬಾ ಒಳ್ಳೆಯ ಮನುಷ್ಯರು,' ಬಾ ನಗುತ್ತಾ ಹೇಳಿದರು, 'ನಮ್ಮ ಬಗ್ಗೆ ಅವರಿಗೆ ತುಂಬಾ ಸ್ನೇಹವಿದೆ. ಪೋಲಕ್‌ಜಿ, ನಿಮಗೆ ಗೊತ್ತೇ ಇದೆ, ಬ್ಯಾರಿಸ್ಟರ್ ಮಾಡಲು ವಿದೇಶಕ್ಕೆ ಕಳುಹಿಸುವಷ್ಟು ಹಣ ನಮ್ಮ ಬಳಿ ಎಲ್ಲಿದೆ? ಈಗ ಡಾ.ಮೆಹತಾ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿರುವಾಗ ಒಂದಿಬ್ಬರು ಮಕ್ಕಳು ಓದಿ ಬ್ಯಾರಿಸ್ಟರ್ ಆಗುತ್ತಾರೆ.' ನಂತರ ಬಾ ಅವರು ಮಣಿಲಾಲನ ತಲೆಯನ್ನು ಸವರುತ್ತಾ ಹೇಳಿದರು, 'ನನ್ನ ಮಣಿ, ಸೇವೆಯ ಕೆಲಸದಲ್ಲಿ ತನ್ನ ತಂದೆಯಂತಿದ್ದಾನೆ. ಇವನು ತಂದೆಯ ಎದುರು ಒಂದೂ ಶಬ್ದವನ್ನು ಮಾತನಾಡುವುದಿಲ್ಲ. ಹಾಂ, ಹರಿಲಾಲನಿಗೆ ಬ್ಯಾರಿಸ್ಟರ್ ಆಗುವ ಆಸೆ ತುಂಬಾ ಇದೆ...ದೇವರು ಅವನ ಆಸೆಯನ್ನು ಈಡೇರಿಸಿದರೆ ಎಷ್ಟು ಚೆಂದ...'

'ಮಿಸ್ಟರ್ ಗಾಂಧಿ ಕೆಲವೇ ದಿನಗಳಲ್ಲಿ ಮರಳಿ ಬರುತ್ತಾರೆ, ಆಗ ಈ ವಿಷಯ ತೀರ್ಮಾನವಾಗುವುದು.' ಪೋಲಕ್ ಮಾತನ್ನು ಮುಗಿಸುತ್ತಾ ಹೇಳಿದರು, 'ಮಿಸೆಸ್ ಗಾಂಧಿ ನಿಮಗೆ ಗೊತ್ತಿಲ್ಲ, ನಿಮ್ಮ ಮಕ್ಕಳ ವಿದ್ಯಾಭ್ಯಾಸ ಪೂರ್ಣವಾಗಬೇಕೆಂದು ನಾನು ಬಾಪೂ ಅವರಿಗೆ ಹೇಳಿದ್ದೆ, ಈ ವಿಷಯದಲ್ಲಿ ನನಗೂ ಅವರಿಗೂ ತೀಕ್ಷ್ಣವಾದ ವಾದವಿವಾದವೇ ನಡೆದಿತ್ತು.'

'ನನಗೆಲ್ಲವೂ ಗೊತ್ತಿದೆ, ಪೋಲಕ್‌ಜಿ,' ಬಾ ಗದ್ಗದಿತರಾಗಿ ಹೇಳಿದರು, 'ಮಕ್ಕಳ ಭವಿಷ್ಯದ ಬಗ್ಗೆ ಯೋಚಿಸಿದಾಗ ನನಗೆ ನಿದ್ರೆಯೇ ಬರುವುದಿಲ್ಲ.'

ಮಣಿಲಾಲನ ಬಾಯಿಯಿಂದ, ಪೋಲಕ್ ಹೇಳಿದ್ದ ಈ ಸುದ್ದಿಯನ್ನು ಕೇಳಿ ಕ್ಷಣಕಾಲ ಹರಿಲಾಲನಿಗೆ ಇದನ್ನು ನಂಬಲು ಸಾಧ್ಯವಾಗಲಿಲ್ಲ. ಅವನು ಹಿಂದೂಸ್ತಾನದಲ್ಲಿ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಬಿಟ್ಟು ಇಲ್ಲಿಗೆ ಬಂದ. ಈ ನಡುವೆ